## ನಿಮ್ಮೊಡನೆ

# ಸಾವಿನ ಘನತೆ ಕಳೆದರೆ ನಾಗರಿಕತೆಗೆ ಅರ್ಥವೆಲ್ಲಿ?

**ಮೃತ ದೇಹಗಳನ್ನು ಹೊತ್ತು ಸಾಗುವ ಘಟನೆಗಳನ್ನು ಏನೆಂದು ಭಾವಿಸಬೇಕು? ಸಂಕಟದಲ್ಲಿ ಇರುವವರ ನೆರವಿಗೆ ಧಾವಿಸುವುದು ಆರೋಗ್ಯಕರ ಸಮಾಜದ ಲಕ್ಷಣ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಂಕಟಕ್ಕೆ ದೊರೆಯುವ ಸ್ಪಂದನದ ಮೇಲೆ ಸಮಾಜ ಮತ್ತು ಆಡಳಿತ ವ್ಯವಸ್ಥೆಯ ಅಂತಃಕರಣವನ್ನು ಗುರ್ತಿಸಬಹುದು.**

ಮೃತರನ್ನು ಹೊತ್ತುಕೊಂಡೋ ಅಥವಾ ಗಾಡಿಯಲ್ಲಿ ತಳ್ಳಿಕೊಂಡೋ ಹೋಗುವ ದೃಶ್ಯಗಳನ್ನು ಇತ್ತೀಚಿನವರೆಗೂ ಸಿನಿಮಾಗಳಲ್ಲಿ ಕಂಡು ಮರುಗುತ್ತಿದ್ದೆವಷ್ಟೇ; ಅಂಥ ದೃಶ್ಯಗಳೀಗ ನಮ್ಮ ನಡುವೆಯೇ ನಡೆಯುತ್ತಿವೆ. ಛತ್ತೀಸಗಡ ಮತ್ತು ಮಧ್ಯಪ್ರದೇಶದಲ್ಲಿ ಕಳೆದ ವಾರ ನಡೆದಿರುವ ಎರಡು ಘಟನೆಗಳು ದುರ್ಬಲರ ಪಾಲಿಗೆ ಸಾವು ಕೂಡ ಹೊರೆಯಾಗಿ ಪರಿಣಮಿಸುವುದಕ್ಕೆ ಉದಾಹರಣೆಯಂತಿವೆ. ಪ್ರಾಥಮಿಕ ಆರೋಗ್ಯಕೇಂದ್ರದಲ್ಲಿ ಮೃತಳಾದ ಏಳು ವರ್ಷದ ಬಾಲಕಿಯನ್ನು ಆಕೆಯ ತಂದೆ ಸುಮಾರು 10 ಕಿ.ಮೀ. ದೂರ ಹೊತ್ತುಕೊಂಡು ಹೋದ ಘಟನೆ ಛತ್ತೀಸಗಡದಲ್ಲಿ ನಡೆದಿದೆ. ಜ್ವರದಿಂದ ಬಳಲುತ್ತಿದ್ದ ಬಾಲಕಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದಾಗ, ದೇಹವನ್ನು ಸಾಗಿಸಲು ವಾಹನದ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಾಗದೆ, ಮಗಳನ್ನು ಹೊತ್ತುಕೊಂಡೇ ತಂದೆ ಹತ್ತು ಕಿ.ಮೀ. ದೂರ ನಡೆದಿದ್ದಾನೆ. ಮಧ್ಯಪ್ರದೇಶದ ರೇವಾ ಜಿಲ್ಲೆಯ ಆರೋಗ್ಯ ಕೇಂದ್ರವೊಂದರಲ್ಲಿ ಮೃತಪಟ್ಟ ಮಹಿಳೆಯ ದೇಹ ಸಾಗಿಸಲು ಆ್ಯಂಬುಲೆನ್ಸ್ ಸಿಗದ ಕಾರಣ, ನಾಲ್ವರು ಮಹಿಳೆಯರು ಮಂಚದೊಂದಿಗೆ ದೇಹವನ್ನು ಹೊತ್ತೊಯ್ದಿದ್ದಾರೆ.

ಮೇಲಿನ ಎರಡೂ ಘಟನೆಗಳಲ್ಲಿ ದೇಹವನ್ನು ಸಾಗಿಸುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ದೇಹವನ್ನು ಭುಜದ ಮೇಲೆ ಹೊತ್ತುಕೊಂಡು ಸಾಗುತ್ತಿರುವ ವ್ಯಕ್ತಿ, ತಾನು ಹಾಗೂ ತನ್ನ ಮಗಳು ಈ ಜಗತ್ತಿಗೆ ಸಂಬಂಧಿಸಿದವರಲ್ಲವೇನೋ ಎನ್ನುವ ಅಸಹಾಯಕ ಭಾವದಲ್ಲಿ ಸಾಗುತ್ತಿರುವಂತಿದೆ. ಮೃತದೇಹವನ್ನು ಹೊತ್ತೊಯ್ಯುತ್ತಿರುವ ನಾಲ್ವರು ಮಹಿಳೆಯರು ಅಸಹಾಯಕರು ಮಾತ್ರವಲ್ಲ, ಮುಗ್ಧರೂ ಆಗಿದ್ದಾರೆ. ಸಾವಿಗೀಡಾದ ಬಾಲಕಿ ಮತ್ತು ಮಹಿಳೆಗೆ ಸಕಾಲಕ್ಕೆ ಸೂಕ್ತ ಚಿಕಿತ್ಸೆ ದೊರೆತಿಲ್ಲವೆಂದೂ ಹೇಳಲಾಗುತ್ತಿದೆ. ಚಿಕಿತ್ಸೆಯ ವೈಫಲ್ಯದ ಜೊತೆಗೆ ಸಾವಿನ ನಂತರವೂ ಅವರನ್ನು ಗೌರವಯುತವಾಗಿ ಬೀಳ್ಕೊಡುವಲ್ಲಿ ಆರೋಗ್ಯ ವ್ಯವಸ್ಥೆ ಹಾಗೂ ಆಡಳಿತ ವಿಫಲವಾಗಿರುವುದು ನಾಗರಿಕ ಜಗತ್ತು ಲಜ್ಜೆ ಮತ್ತು ಪಾಪಪ್ರಜ್ಞೆಯಿಂದ ತಲೆತಗ್ಗಿಸುವಂತಹದ್ದು.

ಮೃತರನ್ನು ಬೀಳ್ಕೊಡುವಲ್ಲಿ ಆಸ್ಪತ್ರೆಗಳು, ಆರೋಗ್ಯ ಇಲಾಖೆ ಕೈಚೆಲ್ಲಿರುವುದು ಇದೇ ಮೊದಲೇನಲ್ಲ. ಆತ್ಮಹತ್ಯೆ ಮಾಡಿಕೊಂಡ ಮಗಳ ಮೃತದೇಹವನ್ನು ತಂದೆಯೊಬ್ಬ ಮಂಚದ ಮೇಲೆ ಇರಿಸಿಕೊಂಡು ಸುಮಾರು 35 ಕಿ.ಮೀ. ನಡೆದ ಘಟನೆ ಕಳೆದ ವರ್ಷ ಮಧ್ಯಪ್ರದೇಶದಲ್ಲೇ ವರದಿಯಾಗಿತ್ತು. ಪೋಸ್ಟ್‌ಮಾರ್ಟಮ್ ಮಾಡಿಸಬೇಕೆನ್ನುವ ಪೊಲೀಸರ ಸೂಚನೆಯ ಮೇರೆಗೆ, ದೂರದ ಜಿಲ್ಲಾಸ್ಪತ್ರೆಗೆ ಮಗಳ ದೇಹವನ್ನು ಬಡಪಾಯಿ ತಂದೆ ಹೊತ್ತುಕೊಂಡೇ ಹೋಗಿದ್ದ. ಇಂಥ ಪ್ರಸಂಗಗಳು ದೇಶದ ವಿವಿಧ ಭಾಗಗಳಲ್ಲಿ ನಡೆಯುವುದೂ, ಆ ಘಟನೆಗಳು ನಡೆದಾಗ ತನಿಖೆಯೆನ್ನುವ ನಾಟಕ ಹಾಗೂ ಬಾಯಿಮಾತಿನ ಅನುಕಂಪ ವ್ಯಕ್ತವಾಗುವುದನ್ನು ನೋಡುತ್ತಲೇ ಇದ್ದೇವೆ. ಕೊರೊನಾ ತೀವ್ರತೆಯ ಸಂದರ್ಭದಲ್ಲಂತೂ ಶವಸಂಸ್ಕಾರದ ಸಂದರ್ಭದಲ್ಲಿ ಕೆಲವರು ಅನಾಗರಿಕವಾಗಿ ವರ್ತಿಸಿದ್ದನ್ನು ಕಂಡಿದ್ದೆವು.

ಮನೆಗಳಲ್ಲೋ ಆಸ್ಪತ್ರೆಯಲ್ಲೋ ಸಾವು ಸಂಭವಿಸಿದಾಗ, ದೇಹವನ್ನು ಉಚಿತವಾಗಿ ಸಾಗಿಸುವ ವ್ಯವಸ್ಥೆ ಕಲ್ಪಿಸುವುದು ಸರ್ಕಾರಕ್ಕೆ ದೊಡ್ಡ ವಿಷಯವೇನಲ್ಲ. ಅಂತ್ಯಸಂಸ್ಕಾರ ಎಲ್ಲಿ ಮಾಡಬೇಕೆನ್ನುವುದು ಕೂಡ ಕೆಲವು ಸಂದರ್ಭಗಳಲ್ಲಿ ಸಮಸ್ಯೆಯಾಗಿ ಪರಿಣಮಿಸುತ್ತದೆ. ಎಲ್ಲ ವರ್ಗದ ಜನರಿಗೂ ಅಂತ್ಯಸಂಸ್ಕಾರದ ವಿಧಿಗಳಿಗೆ ಭೂಮಿ ಒದಗಿಸುವುದು ಸರ್ಕಾರದ ಜವಾಬ್ದಾರಿ. ವ್ಯಕ್ತಿಯೊಬ್ಬನ ಅಂತ್ಯಕ್ರಿಯೆಗೆ 60 ಚದರ ಅಡಿ ಜಾಗವನ್ನು ಕಾಯ್ದಿರಿಸಬೇಕಾದುದು ತಾಲ್ಲೂಕು ಅಥವಾ ಜಿಲ್ಲಾಡಳಿತದ ಕರ್ತವ್ಯ ಎಂದು ‘ಕರ್ನಾಟಕ ಭೂ ಕಂದಾಯ ಕಾಯ್ದೆ–1964’ರ 71ನೇ ಕಲಂ ಹೇಳುತ್ತದೆ. ಆದರೆ, ರಾಜ್ಯದ ಅನೇಕ ಗ್ರಾಮಗಳಲ್ಲಿ ಶವಸಂಸ್ಕಾರಕ್ಕೆ ನಿಗದಿತ ಸ್ಥಳಗಳೇ ಇಲ್ಲ. ಸ್ಮಶಾನ ಭೂಮಿ ಕೊರತೆ ಇರುವ ಗ್ರಾಮ ಮತ್ತು ನಗರಗಳಲ್ಲಿ ಅಗತ್ಯ ಪ್ರಮಾಣದ ಭೂಮಿ ಕಾಯ್ದಿರಿಸುವಂತೆ ಎರಡು ವರ್ಷಗಳ ಹಿಂದೆ ಜಿಲ್ಲಾಧಿಕಾರಿಗಳಿಗೆ ಕಂದಾಯ ಇಲಾಖೆ ಆದೇಶಿಸಿತ್ತು. ಅನಿವಾರ್ಯ ಸಂದರ್ಭಗಳಲ್ಲಿ ಧರ್ಮಾಧಾರಿತವಾಗಿಯೂ ಸ್ಮಶಾನಗಳನ್ನು ಒದಗಿಸುವಂತೆ ತಿಳಿಸಲಾಗಿತ್ತು.

ಸರ್ಕಾರದ ಆದೇಶ ಮತ್ತು ಚರ್ಚೆಗಳ ನಂತರವೂ ಸ್ಮಶಾನಗಳ ಕೊರತೆಯ ಸಮಸ್ಯೆ ಪೂರ್ಣವಾಗಿ ಬಗೆಹರಿದಿಲ್ಲ. ಇದರ ಜೊತೆಗೆ, ದೇಹವನ್ನು ಸಾಗಿಸುವುದು ಕೂಡ ಕೆಲವು ಸಂದರ್ಭಗಳಲ್ಲಿ ಸಮಸ್ಯೆಯಾಗಿ ಪರಿಣಮಿಸುತ್ತದೆ. ದಲಿತರು ಹಾಗೂ ಬಡವರ ಮನೆಗಳಲ್ಲಿ ಸಂಭವಿಸುವ ಸಾವಿನ ದುಃಖವನ್ನು, ಆರ್ಥಿಕ ಹಾಗೂ ಸಾಮಾಜಿಕ ಅಡೆತಡೆಗಳು ಮತ್ತಷ್ಟು ಹೆಚ್ಚಿಸುತ್ತವೆ. ಅಂಥ ಸಂದರ್ಭದಲ್ಲಿ, ಸಂಕಟದಲ್ಲಿ ಇರುವವರ ನೆರವಿಗೆ ಧಾವಿಸುವುದು ಆರೋಗ್ಯಕರ ಸಮಾಜದ ಲಕ್ಷಣ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಂಕಟಕ್ಕೆ ದೊರೆಯುವ ಸ್ಪಂದನದ ಮೇಲೆ ಸಮಾಜ ಮತ್ತು ಆಡಳಿತ ವ್ಯವಸ್ಥೆಯ ಅಂತಃಕರಣವನ್ನು ಗುರ್ತಿಸಬಹುದಾಗಿದೆ. ಬದುಕಿನ ಘನತೆಯನ್ನಂತೂ ಬೀದಿಪಾಲು ಮಾಡಿದ್ದೇವೆ. ಸಾವನ್ನಾದರೂ ಗೌರವದಿಂದ ಕಾಣದೆ ಹೋದರೆ ನಾಗರಿಕತೆಗೆ ಅರ್ಥವೇ ಉಳಿಯುವುದಿಲ್ಲ.

■ **ರಘುನಾಥ ಚ.ಹ.**



ಈಶ್ವರ್